ಜಾಗಗಳು) ಯಾಕೋ ಬೋರು ಬರತೊಡಗಿದವು. ಹಾಸ್ಟೆಲ್ಲಿನ ಊಟದ ಬೆಲ್ಲು ಬಿದ್ದಾಗ ಮಕ್ಕಳು ಸಾಲಾಗಿ ತಟ್ಟೆ ಹಿಡಿದು ಹಣ್ಣು, ಕಾಳಿನಾಸೆಗೆ ಬಂದು ಹೋಗುವ ಹಕ್ಕಿಗಳ ಚಿತ್ರ ತೆಗೆಯುವುದು ಯಾಕೋ ಕೃತಕ ಎನಿಸಿತೊಡಗಿತು. ಸಾಕಷ್ಟು ಪಟಗಳ ತೆಗೆದವಾದರೂ ನಮ್ಮ ಆಸೆ, ಆಸಕ್ತಿಗಳು ಹಿಗ್ಗುವ ಬದಲು ಕುಗ್ಗತೊಡಗಿದವು.

ಒಂಚೂರು ನಯ, ನಾಚಿಕೆ ಇಲ್ಲದ, ಜನರ ಸಾಮಿಪ್ಯದ ಸಲಿಗೆ ಬೆಳೆಸಿಕೊಂಡ ಹಕ್ಕಿಗಳು ಅದೆಷ್ಟೇ ಚೆಂದವಿದ್ದರೂ, ಮೃಗಾಲಯದ ಫೀಲಿಂಗ್ ಕೊಟ್ಟು ಬಿಡುತ್ತವೆ. ನಮ್ಮ ಕಂಡು ಗಾಬರಿಗೊಳ್ಳುವ, ಸಿಗದೆ ಹಾರಿ ಹೋಗುವ, ಸುತ್ತಾಡಿಸಿ ಸತಾಯಿಸುವ, ಅನೇಕ ಹಾವಭಾವಗಳ ಪ್ರಕಟಿಸುವ, ಸಹಜ ವಾತಾವರಣದಲ್ಲಿ ಅಚಾನಕ್ಕಾಗಿ ಸಿಗುವ ಪಕ್ಷಿಗಳ ನೋಡುವುದೇ ನಿಜವಾದ ಆನಂದ. ಎದ್ದು ಬಿದ್ದು ಒದ್ದಾಡಿ ಫಜೀತಿಪಟ್ಟು ಹಕ್ಕಿ ಚಿತ್ರ ಸೆರೆ ಹಿಡಿಯುವ ಮಜವೇ ಬೇರೆ.

ಹೀಗಾಗಿ ನಾನು ಅಂಕಿತನಿಗೆ "ಏಯ್ ಅಣ್ಣ ಈ ಹೈಡುಗಳ ಸಹವಾಸವೇ ಬೇಡ. ಹಳ್ಳ, ಕಾಡು ಕಣಿವೆ ತರಹದ ಜಾಗಗಳಿಗೆ ಕರ್ಕೊಂಡು ಹೋಗು. ನಾವು ಮಂಡಿ ಮುಸುಡಿ ಒಡಕೊಂಡು ಪಟ ತೆಗೆಯಬೇಕು. ನಡೆದು ನಡೆದೂ ಈ ನಿಸರ್ಗವ ಸವಿಯಬೇಕು. ಕಣ್ಣಿಗೆ ಕಾಣದೆ ಮರೆಯಲ್ಲಿದ್ದು ಕೂಗುವ ಹಕ್ಕಿ ದನಿಯ ಆಲಿಸಿ, ಹಿಂಬಾಲಿಸಿ ಚಿತ್ರ ತೆಗೆಯಬೇಕು" ಎಂದು ಭಾವಪೂರ್ಣವಾಗಿ ಹೇಳಿದೆ. ಅದಕ್ಕವನು ಖುಷಿಗೊಂಡು "ಆಗಲಿ ನಾಳೆಯಿಂದ ಹಂಗೆ ಪ್ರೋಗ್ರಾಂ ಫಿಕ್ಸ್ ಮಾಡೋಣ ಸರ್" ಎಂದು ಒಪ್ಪಿಕೊಂಡ. ಒಂದಿಷ್ಟು ರಿಸ್ಕ್ ತೆಗೆದುಕೊಂಡು ನಮ್ಮ ಸಹನೆ, ಮತ್ತು ಸಾಹಸ ಪರೀಕ್ಷೆ ಮಾಡಿಕೊಳ್ಳುವ ಈ ರೋಮಾಂಚಕ ಸಮಯ ಬಿಡಬಾರದು. ಈ ರೀತಿಯ ಫೋಟೊಗ್ರಫಿಯಲ್ಲಿ ಮಾತ್ರ ಕಾತರ, ಕುತೂಹಲ, ಮತ್ತು ನಿರೀಕ್ಷೆಗಳು ಹೆಚ್ಚುತ್ತವೆ. ಪಟ ದಕ್ಕುವುದು ಸ್ವಲ್ಪವೇ ಆದರೂ ಈ ನಿಸರ್ಗದತ್ತ ನಡಿಗೆಯದಲ್ಲಿ ಖುಷಿ ತುಂಬಿರುತ್ತದೆ.

ಬೇರೆಯವರಿಗೆ ಕೆಲಸವಿಲ್ಲದೆ ಕೂತು ಸಮಯ ವ್ಯರ್ಥ ಮಾಡುವ ದಂಡಪಿಂಡಗಳಂತೆ ನಾವು ಕಂಡರೂ ಚಿಂತೆಯಿಲ್ಲ. ಆ ಮೌನದ ಕಾಯುವಿಕೆಯಲ್ಲಿ; ನಿಶ್ಯಬ್ದ ಧ್ಯಾನದಲ್ಲಿ; ಮನಸ್ಸು ನೂರಾರು ಕನಸುಗಳ ಹೆಣೆಯುತ್ತದೆ. ಪಕ್ಷಿಗಳು ತಾವಾಗಿಯೇ ಹಾರಿಬಂದು ಇಲ್ಲಿ ಈ ರೆಂಬೆ ಮೇಲೆ ಕೂತರೆ, ಅದಕ್ಕೆ ಹಸಿರಿನ ದಟ್ಟ ಈ ಹಿನ್ನೆಲೆ ಇದ್ದರೆ ಹೇಗಿರುತ್ತದೆ? ಎಂದು ನಾವು ಕಲ್ಪಿಸಿಕೊಳ್ಳುತ್ತೇವೆ. ನಿಜವಾಗಿಯೂ ಮನ ಅಂದುಕೊಂಡಂತೆ ನಮ್ಮೆದುರಿಗೆ ಪಕ್ಷಿ ಬಂದು ಕೂತೇ ಬಿಟ್ಟರೆ ಆಗ ಸಿಗುವ ಹರ್ಷದ ಸುಖವಿದೆಲ್ಲ! ಅದು ಸ್ವರ್ಗ ಸಮಾನ ಚಮತ್ಕಾರ.

ಕಾಡಿನ ಅಸಡ ಬಸಡಾ ಜಾಗಗಳಲ್ಲಿ ಕೂರುವುದು ಪಟಗಾರರಿಗೆ ಭೂಷಣ. ಸದಾ ಮೆತ್ತಗಿನ ಸೋಪಾಗಳಲ್ಲಿ ಕೂತು ನಾಜೂಕಾದ ಕುಂಡೆಗಳ ನಿಜವಾದ ಹಣೇಬರ ಗೊತ್ತಾಗುವುದು ಆಗಲೆ. ನದಿ, ಹಳ್ಳಗಳ ಜಾರುಬಂಡೆಗಳ ಹಿಂದಡಗಿ, ಮರದ ಮರೆ ಬಳಸಿ, ಪೊದೆಯ ಆಸರೆ ಉಪಯೋಗಿಸಿ ಹಕ್ಕಿಗಳ ಫೋಟೊ ತೆಗೆಯುವುದೇ ನಿಜವಾದ ಸಡಗರ. ಕೆಸರು ಮೆತ್ತಿಕೊಂಡು, ಮುಳ್ಳು ಚುಚ್ಚಿಸಿಕೊಂಡು, ಅಲ್ಲಲ್ಲಿ ಪುಸಕ್ಕನೆ ಜಾರಿ ಬಿದ್ದು, ನೆಲದ ಮೇಲೆ ತೆವಳಿ ನಡೆಸುವ ಛಾಯಾಗ್ರಹಣ ಸಾಹಸಮಯ. ಸಹಜ ಫೋಟೊಗ್ರಫಿ ಮಾಡ ಬಯಸುವ ಅನೇಕರು ಇಂಥ ವಿಧಾನವನ್ನೇ ಹೆಚ್ಚಾಗಿ ಬಯಸುತ್ತಾರೆ.

ಇದನ್ನು ದುಸ್ಸಾಹಸ ಅಂತ ಕೂಡ ಕರೆಯಬಹುದು. ಇಲ್ಲಿ ಪಕ್ಷಿಗಳು ಸಿಗುವುದಕ್ಕಿಂತ ತಪ್ಪಿಸಿಕೊಂಡು ಓಡಿ ಹೋಗುವುದೇ ಹೆಚ್ಚು. ಆದರೆ, ಅನೇಕ ಹೊಸ ಹೊಸ ಅನುಭವಗಳನ್ನು ಕಟ್ಟಿಕೊಡುವ ಈ ವಿಧಾನ ಬದುಕಿನ ಆಸೆಗಳ ಇಮ್ಮಡಿಸುತ್ತದೆ. ನಮ್ಮ ಕ್ರಿಯಾಶೀಲತೆಯನ್ನು ಹೆಚ್ಚಿಸುತ್ತದೆ. ಕಣ್ಣಿಗೆ ಕಂಡು ಕೈಗೆ ಸಿಗದೆ ಓಡಿಹೋಗುವ ಪಕ್ಷಿಗಳು ಮತ್ತದರ ನೆನಪುಗಳು ಮನದಲ್ಲಿ ಕಾಡುತ್ತವೆ. ಜೀವನದಲ್ಲಿ ಸಲೀಸಾಗಿ ಸಿಗುವ ಯಾವುದೂ ಕೂಡ ಮನುಷ್ಯನ ಅಂತರಾಳವನ್ನು ತಣಿಸುವುದಿಲ್ಲ. ಹುಡುಕಾಟ ತಡಕಾಟ, ಪರದಾಟ, ಹೋರಾಟಗಳಿಂದ ಸಿಗುವ ಆನಂದ ಮತ್ತು ಆಸಕ್ತಿಗಳೇ ನಮ್ಮನ್ನು ಸದಾ ಜೀವಂತವಾಗಿ ಇಡುತ್ತವೆ. ಕಷ್ಟಪಟ್ಟುಗಳಿಸಿದ್ದು ಯಾವತ್ತೂ ಮಹತ್ವದ್ದೇ ಆಗಿರುತ್ತದೆ.

ಅಸಲಿಗೆ ನಾವು ಪಟ್ಟಿ ಮಾಡಿಟ್ಟುಕೊಂಡು ಹೋದ ಅನೇಕ ಪಕ್ಷಿಗಳು ಅಲ್ಲಿ ಸಿಗಲೇ ಇಲ್ಲ. ನನ್ನ ಕನವರಿಕೆಯ ಸ್ಕೇರ್ಲೆಟ್ ಫಿಂಚ್ ಹಕ್ಕಿಯ ದರ್ಶನವೂ ಆಗಲಿಲ್ಲ. "ಅದು ಚೋಪ್ತಾದಲ್ಲಿ ಸಿಗುತ್ತೆ. ನೀವು ಅದಕ್ಕಾಗಿ ನಾನೂರು ಮೈಲಿ ತಿರುವು ಮುರುವಾದ ಕಠಿಣ